# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 328(400) |
| ಸದಸ್ಯರ ಹೆಸರು | : | ಶ್ರೀ ಶಶಿಲ್ .ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಿಂದ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ದಿನಾಂಕಗಳು ಪದೇ-ಪದೇ ಬದಲಾಗುತ್ತಿರುವುದರಿಂದ ಅಭ್ಯರ್ಥಿಗಳು ಗೊಂದಲಕ್ಕೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಅಭ್ಯರ್ಥಿಗಳ ಅನೂಕೂಲಕ್ಕಾಗಿ ಈ ಗೊಂದಲವನ್ನು ಪರಿಹರಿಸಲು ತೆಗೆದುಕೊಳ್ಳಬಹುದಾದ ಕ್ರಮಗಳೇನು: | ರಾಜ್ಯ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಿಂದ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ವಿವರ ಈ ಕೆಳಕಂಡಂತಿದೆ.<br><br>• **ಕರ್ನಾಟಕ ಲೋಕಸೇವಾ ಆಯೋಗದ ವಿವರ:**<br><br>ಆಯೋಗವು ಪರೀಕ್ಷೆಯನ್ನು ನಡೆಸಲು ನಿಗದಿಪಡಿಸಬಹುದಾದ ದಿನಾಂಕಗಳನ್ನು UPSC, SSC, NTA ಹಾಗೂ ಇತರೆ ಪ್ರಮುಖ ನೇಮಕಾತಿ ಪ್ರಾಧಿಕಾರಗಳಿಂದ ಪ್ರಕಟಿತವಾಗುವ ವೇಳಾಪಟ್ಟಿಯನ್ನು ಗಮನದಲ್ಲಿರಿಸಿಕೊಂಡು ತಾತ್ಕಾಲಿಕ ಪರೀಕ್ಷಾ ದಿನಾಂಕಗಳನ್ನು ನಿಗದಿಪಡಿಸಲಾಗುತ್ತದೆ. ಆದಾಗ್ಯೂ ಕೆಲವೊಂದು ಪರೀಕ್ಷಾ ದಿನಾಂಕಗಳಂದು ನಿಗದಿಯಾಗಿರುವ ಬಗ್ಗೆ ಆನಂತರದಲ್ಲಿ ಅಭ್ಯರ್ಥಿಗಳಿಂದ ಅಥವಾ ಇತರೇ ಮೂಲಗಳಿಂದ ಮಾಹಿತಿ ದೊರೆತಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಪರೀಕ್ಷೆಗಳ ಮೇಲೆ ಆಗುವ ಪರಿಣಾಮಗಳ ಬಗ್ಗೆ ಆಯೋಗದ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿ ಅಗತ್ಯವಿದ್ದಲ್ಲಿ ದಿನಾಂಕವನ್ನು ಮರುನಿಗದಿಪಡಿಸಲಾಗುವುದು.<br><br>• ಸರ್ಕಾರದ ವಿವಿಧ ಇಲಾಖೆಗಳಿಂದ ಸ್ವೀಕೃತವಾಗುವ ಪ್ರಸ್ತಾವನೆಗನುಸಾರವಾಗಿ ಹುದ್ದೆಗಳ ಸಂಖ್ಯೆಗೆ ಅಧಿಸೂಚನೆಯನ್ನು ಜಾರಿ ಮಾಡಿ ಪರೀಕ್ಷಾ ದಿನಾಂಕವನ್ನು ನಿಗದಿಪಡಿಸಲಾಗುತ್ತದೆ. ಆದರೆ, ಮತ್ತೊಮ್ಮೆ ಸರ್ಕಾರ/ವಿವಿಧ ಇಲಾಖೆಗಳಿಂದ ಹುದ್ದೆಗಳ ಸಂಖ್ಯೆಯನ್ನು ಸೇರ್ಪಡೆಗೊಳಿಸುವಂತೆ ಮತ್ತೊಮ್ಮೆ ಮನವಿಯು ಸ್ವೀಕೃತವಾದಲ್ಲಿ, ಸೇರ್ಪಡೆ ಅಧಿಸೂಚನೆಯನ್ನು ಹೊರಡಿಸಿ, ಮತ್ತೊಮ್ಮೆ ಅರ್ಜಿ ಸಲ್ಲಿಸದ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡುವ ಸಂದರ್ಭದಲ್ಲಿ ನಿಗದಿಪಡಿಸಲಾದ ದಿನಾಂಕವನ್ನು ಬದಲಾಯಿಸುವ ಸಂದರ್ಭ ಉಂಟಾಗುತ್ತದೆ.<br><br>• ಚುನಾವಣೆ ಹಾಗೂ ಇತರೆ ಬಂದ್ ಘೋಷಿತವಾದ ಸಂದರ್ಭದಲ್ಲಿ ಬದಲಾಯಿಸಲಾಗುವುದು. |

ಮೇಲೆ ವಿವರಿಸಲಾದ ಯಾವುದೇ ಸಂದರ್ಭದಲ್ಲಿಯೂ ಪರೀಕ್ಷಾ ದಿನಾಂಕವನ್ನು ಬದಲಾಯಿಸಿದರೂ ಸಹ ಪತ್ರಿಕಾ ಪ್ರಕಟಣೆ ಹಾಗೂ ಆಯೋಗದ ವೆಬ್‌ಸೈಟ್‌ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಣೆ ನೀಡಲಾಗುವುದು.

**ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವಿವರ:**

ಸರ್ಕಾರದ ಆದೇಶ ಸಂಖ್ಯೆ :ಒಇ 73 ಪಿಇಐ ದಿನಾಂಕ:13-11-2023ರನ್ವಯ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ:10-11-2023ರ ತೀರ್ಪಿನನ್ವಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್(ಸಿವಿಲ್) (ಪುರುಷ ಮತ್ತು ಮಹಿಳಾ) ಹಾಗೂ ಸೇವೆಯಲ್ಲಿರುವವರು (ಮಿಕ್ಕುಳಿದ) ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳಿಯ ಹುದ್ದೆಗಳನ್ನು ಒಳಗೊಂಡಂತೆ ಒಟ್ಟು 545 ಖಾಲಿ ಹುದ್ದೆಗಳ ನೇರ ನೇಮಕಾತಿಯ ಮರು ಪರೀಕ್ಷೆಯನ್ನು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಿ ಆದೇಶಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ದಿನಾಂಕ:23-12-2023ರಂದು ಸದರಿ ನೇಮಕಾತಿಯ ಹುದ್ದೆಗಳಿಗೆ ಮರು ಪರೀಕ್ಷೆ ನಡೆಸಲು ಯೋಜಿಸಲಾಗಿತ್ತು. ಆದರೆ ಅನೇಕ ಅಭ್ಯರ್ಥಿಗಳು ಪರೀಕ್ಷೆಗೆ ತಯಾರಿ ನಡೆಸಲು ಹೆಚ್ಚಿನ ಸಮಯಾವಕಾಶ ನೀಡಬೇಕೆಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದ ಕಾರಣ, ಸರ್ಕಾರದ ನಿರ್ದೇಶನದಂತೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪಿಎಸ್ಐ ಮರು ಪರೀಕ್ಷೆಯನ್ನು ದಿನಾಂಕ:23-01-2024ರಂದು ನಡೆಸಿರುತ್ತದೆ. ಇನ್ನು ಇತರೆ ಯಾವುದೇ ಪರೀಕ್ಷೆಗಳ ದಿನಾಂಕಗಳನ್ನು ಪದೇ ಪದೇ ಬದಲಾಯಿಸಿಲ್ಲ.ಇತರೆ ಇಲಾಖೆಗಳ ಪರೀಕ್ಷೆಗಳು ಒಂದೇ ದಿನಾಂಕಕ್ಕೆ ನಿಗದಿಯಾದರೆ ಅಭ್ಯರ್ಥಿಗಳ ಹಿತದೃಷ್ಠಿಯಿಂದ ಅನಿವಾರ್ಯವಾಗಿ ಪರೀಕ್ಷೆ ದಿನಾಂಕ ಬದಲಾಯಿಸಬೇಕಾಗುತ್ತದೆ.

**ಒಳಾಡಳಿತ ಇಲಾಖೆಯ ವಿವರ:**

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಿಂದ ನಡೆಸಲ್ಪಟ್ಟ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಿಗದಿತ ದಿನಾಂಕದಂದೆ ನಡೆಸಲಾಗಿರುತ್ತದೆ. ಆದರೆ ಈ ಕೆಳಕಂಡ ಪರೀಕ್ಷೆಗಳನ್ನು ಮಾತ್ರ ಅನಿರ್ವಾಯ ಕಾರಣದಿಂದ ಬದಲಿ ದಿನಾಂಕದಂದು ನಡೆಸಲಾಗಿರುತ್ತದೆ.

1. 2022ನೇ ಸಾಲಿನ ಕಲ್ಯಾಣ ಕರ್ನಾಟಕ ಭಾಗದ ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್-420 ಹುದ್ದೆಗಳ ನೇಮಕಾತಿಗಾಗಿ ದಿನಾಂಕ:06-08-2023ರಂದು

| | | |
|---|---|---|
| | | ನಿಗದಿಪಡಿಸಿದ್ದು, ಸದರಿ ದಿನಾಂಕದಂದು ಪರೀಕ್ಷೆ ಕೇಂದ್ರಗಳು ಲಭ್ಯವಿಲ್ಲದ ಕಾರಣ ದಿನಾಂಕ:10-09-2023 ರಂದು ನಡೆಸಲಾಗಿರುತ್ತದೆ.<br><br>2. ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) - 454 ಹುದ್ದೆಗಳ ನೇಮಕಾತಿಗಾಗಿ ದಿನಾಂಕ:05-11-2023ರಂದು ನಿಗದಿಪಡಿಸಲಾಗಿರುತ್ತದೆ. ಆದರೆ ಸದರಿ ದಿನಾಂಕದಂದು ಕೆ.ಪಿ.ಎಸ್.ಸಿ, ವತಿಯಿಂದಲೂ ಸಹ ಸಹಾಯಕ ಹುದ್ದೆಗಳ ಲಿಖಿತ ಪರೀಕ್ಷೆಯನ್ನು ನಡೆಸಲು ನಿಗದಿ ಪಡಿಸಲಾಗಿದ್ದು, ಆ ವೇಳೆಯಲ್ಲಿ ಅಭ್ಯರ್ಥಿಗಳ ಕೋರಿಕೆಯನ್ವಯ ಸದರಿ ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳ ಲಿಖಿತ ಪರೀಕ್ಷೆಯನ್ನು ದಿನಾಂಕ:10-12-2023ರಂದು ನಡೆಸಲಾಗಿರುತ್ತದೆ. |
| ಆ | ರಾಜ್ಯದಲ್ಲಿ ನೇಮಕಾತಿ ನಡೆಸುವ ಪರೀಕ್ಷಾ ಪ್ರಾಧಿಕಾರಗಳು ಯಾವ ಮಾನದಂಡಗಳಲ್ಲಿ ಪರೀಕ್ಷಾ ದಿನಾಂಕ ಹಾಗೂ ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸುತ್ತಿವೆ; | ರಾಜ್ಯದಲ್ಲಿ ನೇಮಕಾತಿ ನಡೆಸುವ ಪರೀಕ್ಷಾ ಪ್ರಾಧಿಕಾರಗಳು ಈ ಕೆಳಕಂಡ ಮಾನದಂಡದ ಅಡಿಯಲ್ಲಿ ಪರೀಕ್ಷಾ ದಿನಾಂಕಗಳನ್ನು ನಿಗದಿಪಡಿಸುತ್ತದೆ.<br><br>**ಕರ್ನಾಟಕ ಲೋಕಸೇವಾ ಆಯೋಗ:**<br><br>• UPSC, SSC, NTA ಹಾಗೂ ಇತರೆ ಪ್ರಮುಖ ನೇಮಕಾತಿ ಪ್ರಾಧಿಕಾರಗಳು ಪರೀಕ್ಷೆಗಳಿಗೆ ನಿಗದಿಪಡಿಸುವ ದಿನಾಂಕಗಳ ಆಧಾರದ ಮೇಲೆ.<br>• ಅಭ್ಯರ್ಥಿಗಳಿಂದ ಸ್ವೀಕೃತವಾಗುವ ಅರ್ಜಿಗಳ ಸಂಖ್ಯೆಗಳ ಆಧಾರದ ಮೇಲೆ.<br>• ಅರ್ಜಿಗಳ ಸಂಖ್ಯೆಗನುಗುಣವಾಗಿ ಸುಸಜ್ಜಿತವಾದ ಪರೀಕ್ಷಾ ಕೇಂದ್ರಗಳ ಲಭ್ಯತೆ ಆಧಾರದ ಮೇಲೆ.<br><br>**ಕರ್ನಾಟಕ ಪರೀಕ್ಷಾ ಪ್ರಾಧಿಕಾರ:**<br><br>ರಜೆದಿನಗಳು ಮತ್ತು ಇತರೆ ಯಾವುದೇ ಇಲಾಖೆಗಳ ಪರೀಕ್ಷೆಗಳು ಇಲ್ಲದಿರುವುದನ್ನು ಖಾತ್ರಿಪಡಿಸಿಕೊಂಡು ಪರೀಕ್ಷಾ ಕೇಂದ್ರಗಳನ್ನು ಹಾಗೂ ದಿನಾಂಕಗಳನ್ನು ನಿಗದಿಪಡಿಸಲಾಗುತ್ತದೆ.<br><br>**ಒಳಾಡಳಿತ ಇಲಾಖೆ :**<br><br>1. ಪರೀಕ್ಷಾ ಕೇಂದ್ರಗಳ ಲಭ್ಯತೆ.<br>2. ಇತರೆ ಪರೀಕ್ಷಾ ಪ್ರಾಧಿಕಾರಗಳಾದ ಕೆ.ಪಿ.ಎಸ್.ಸಿ, ಕೆ.ಇ.ಎ, ಇತರೆ ನೇಮಕಾತಿ ಸಂಸ್ಥೆಗಳು ನಿಗದಿಪಡಿಸಿರುವ ಪರೀಕ್ಷೆ ಮತ್ತು ಪರೀಕ್ಷಾ ದಿನಾಂಕಗಳ ಪರಿಗಣನೆ.<br>3. ರಾಜ್ಯದಲ್ಲಿ ಪೂರ್ವ ನಿಯೋಜಿತ/ಸಂಭಾವ್ಯ ಮುಷ್ಕರ, ತುರ್ತು ಪರಿಸ್ಥಿತಿ ಹಾಗೂ ಹವಾಮಾನ ವೈಪರಿತ್ಯಾಗಳ ಪರಿಗಣನೆ<br>4. ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಪದವಿ ಹಾಗೂ ಇತರೆ ಶೈಕ್ಷಣಿಕ ಆಧಾರಿತ ಪರೀಕ್ಷಾ ದಿನಾಂಕಗಳ ಪರಿಗಣನೆ.<br>5. ಅಭ್ಯರ್ಥಿಗಳಿಗೆ ಅನುಕೂಲ. |

| | | |
|---|---|---|
| ಇ | ರಾಜ್ಯದ ನೇಮಕಾತಿ ಪರೀಕ್ಷಾ ಪ್ರಾಧಿಕಾರಗಳು ವೇಳಾಪಟ್ಟಿಯನ್ನು ಸಿದ್ಧಪಡಿಸುವಾಗ ಕೇಂದ್ರ ಸರ್ಕಾರದ ನೇಮಕಾತಿ ಪ್ರಾಧಿಕಾರಗಳು (UPSC, SSC, IBPS, NTA ಸೇರಿದಂತೆ) ನಡೆಸುವ ನೇಮಕಾತಿ ವೇಳಾ ಪಟ್ಟಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತವೆಯೇ; (ವಿವರ ನೀಡುವುದು) | **ಕರ್ನಾಟಕ ಲೋಕಸೇವಾ ಆಯೋಗದ ಮಾಹಿತಿ:**<br>ಕೇಂದ್ರ ಸರ್ಕಾರದ ನೇಮಕಾತಿ ಪ್ರಾಧಿಕಾರಗಳು (UPSC, SSC, NTA ಸೇರಿದಂತೆ ರಾಜ್ಯ ಸರ್ಕಾರದ ಇತರೆ ಪ್ರಮುಖ ನೇಮಕಾತಿ ಪ್ರಾಧಿಕಾರ (KEA, Police department, etc) ಗಳಿಂದ ಹೊರಡಿಸುವ ವೇಳಾಪಟ್ಟಿಗಳನ್ನು ಪರಿಗಣಿಸಲಾಗುತ್ತದೆ.<br><br>**ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮಾಹಿತಿ:**<br>ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪರೀಕ್ಷಾ ವೇಳಾಪಟ್ಟಿಯನ್ನು ತಯಾರಿಸುವಾಗ ವಿವಿಧ ಇಲಾಖೆಗಳು ಪ್ರಕಟಿಸುವ ಪರೀಕ್ಷಾ ದಿನಾಂಕವನ್ನು ಪರಿಗಣನೆಗೆ ತೆಗೆದುಕೊಂಡು ವೇಳಾಪಟ್ಟಿಯನ್ನು ತಯಾರಿಸುತ್ತದೆ.<br><br>**ಒಳಾಡಳಿತ ಇಲಾಖೆಯ ಮಾಹಿತಿ** : ಹೌದು, ಕೇಂದ್ರ ಸರ್ಕಾರದ ನೇಮಕಾತಿ ಪ್ರಾಧಿಕಾರಗಳು ಸೇರಿದಂತೆ ಇತರ ನೇಮಕಾತಿ ಪ್ರಾಧಿಕಾರಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಗೊಂದಲಕ್ಕೀಡಾಗದಂತೆ ಭಾಗವಹಿಸಲು ಅನುಕೂಲವಾಗುವಂತೆ ಪೊಲೀಸ್ ಇಲಾಖೆಯ ಪರೀಕ್ಷಾ ವೇಳಾ ಪಟ್ಟಿಯನ್ನು ನಿಗದಿಪಡಿಸಲು ಎಲ್ಲಾ ರೀತಿಯಲ್ಲೂ ಪ್ರಯತ್ನ ಮಾಡಲಾಗುತ್ತಿದೆ. |
| ಈ | ಈ ಗೊಂದಲಗಳನ್ನು ನಿವಾರಿಸಲು ರಾಜ್ಯದ ಪರೀಕ್ಷಾ ಪ್ರಾಧಿಕಾರಗಳು ಕೇಂದ್ರ ಲೋಕಸೇವಾ ಆಯೋಗ ಮತ್ತು ಸಿಬ್ಬಂದಿ ನೇಮಕಾತಿ ಆಯೋಗಗಳ ಮಾದರಿಯಲ್ಲಿ ನೇಮಕಾತಿಯ ವರ್ಷದ ಕ್ಯಾಲೆಂಡರ್ (ಪರೀಕ್ಷಾ ವೇಳಾ ಪಟ್ಟಿಯನ್ನು) ಬಿಡುಗಡೆ ಮಾಡಬಹುದಲ್ಲವೇ: ಈ ಕುರಿತು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳಾವುವು?(ವಿವರ ನೀಡುವುದು) | **ಕರ್ನಾಟಕ ಲೋಕಸೇವಾ ಆಯೋಗ:**<br>ಕೇಂದ್ರ ಲೋಕಸೇವಾ ಆಯೋಗದಿಂದ ಗ್ರೂಪ್-ಎ & ಬಿ ಮತ್ತು ಸಿಬ್ಬಂದಿ ನೇಮಕಾತಿ ಆಯೋಗದಿಂದ ಗ್ರೂಪ್-ಸಿ ಹುದ್ದೆಗಳಿಗೆ ಸಂಬಂಧಿಸಿದ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತದೆ.<br><br>ಆದರೆ, ಕರ್ನಾಟಕ ಲೋಕಸೇವಾ ಆಯೋಗವು ವಿವಿಧ ಗ್ರೂಪ್-ಎ, ಬಿ, ಸಿ ಮೂರೂ ವೃಂದದ ಹುದ್ದೆಗಳಿಗೂ ಪರೀಕ್ಷೆಯನ್ನು ನಡೆಸಬೇಕಿದ್ದು, ಅದರೊಂದಿಗೆ ಇಲಾಖಾ ಪರೀಕ್ಷೆಗಳನ್ನು ಪ್ರತಿ ವರ್ಷ ಎರಡು ಅಧಿವೇಶನಗಳಲ್ಲಿ ನಡೆಸಬೇಕಿರುತ್ತದೆ.<br><br>ಮುಂದುವರೆದು, ಕೇಂದ್ರ ಲೋಕಸೇವಾ ಆಯೋಗವು ಪ್ರತಿ ಹುದ್ದೆಗಳಿಗೆ ನಿರ್ದಿಷ್ಟಪಡಿಸಿದ ದಿನಾಂಕಗಳಂದು ಅಧಿಸೂಚನೆಗಳನ್ನು ಹೊರಡಿಸಿ ವರ್ಷದ ಪರೀಕ್ಷಾ ವೇಳಾಪಟ್ಟಿಯಂತೆ ಪರೀಕ್ಷೆಗಳನ್ನು ನಡೆಸುತ್ತದೆ. ಆದರೆ, ಆಯೋಗವು ಸರ್ಕಾರ/ಸರ್ಕಾರದ ವಿವಿಧ ಇಲಾಖೆಗಳಿಂದ ವಿವಿಧ ಗ್ರೂಪ್- ಎ, ಬಿ, ಸಿ ಹುದ್ದೆಗಳಿಗೆ ಕಾಲಕಾಲಕ್ಕೆ |

| | | |
|---|---|---|
| | | ಸ್ವೀಕೃತವಾಗುವ ಪ್ರಸ್ತಾವನೆಯ ಆಧಾರದ ಮೇಲೆ ಅಧಿಸೂಚನೆಯನ್ನು ಹೊರಡಿಸಿ ಸಂದರ್ಭಕ್ಕನುಗುಣವಾಗಿ ಪರೀಕ್ಷಾ ದಿನಾಂಕಗಳನ್ನು ನಿಗದಿಪಡಿಸಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ<br><br>**ಕರ್ನಾಟಕ ಪರೀಕ್ಷಾ ಪ್ರಾಧಿಕಾರ:**<br><br>ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಿವಿಧ ಇಲಾಖೆಯ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಸಂಬಂಧ ಕೋರಿ ಬರುವ ಪ್ರಸ್ತಾವನೆಗಳ ಆಧಾರದ ಮೇಲೆ ಪರೀಕ್ಷಾ ವೇಳಾಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.<br><br>**ಒಳಾಡಳಿತ ಇಲಾಖೆ :**<br><br>ಪೊಲೀಸ್ ಇಲಾಖೆಗೆ ಸರ್ಕಾರವು ಆರ್ಥಿಕ ಇಲಾಖೆಯಿಂದ ಕಾಲಕಾಲಕ್ಕೆ ನೇರ ನೇಮಕಾತಿ ಹುದ್ದೆಗಳನ್ನು ನಿರ್ದಿಷ್ಟಪಡಿಸಿ ನೀಡುವ ಮಂಜೂರಾತಿಯನ್ವಯ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವುದರಿಂದ ಇಲಾಖೆಯಲ್ಲಿ ವರ್ಷದ ಕ್ಯಾಲೆಂಡರ್ ವೇಳಾಪಟ್ಟಿ ಬಿಡುಗಡೆಗೊಳಿಸಲು ಸಾಧ್ಯವಾಗಿರುವುದಿಲ್ಲ. |

**ಸಂಖ್ಯೆ.ಸಿಆಸುಇ 140 ಎಸ್‌ಎಲ್‌ಎ 2024**

**(ಸಿದ್ದರಾಮಯ್ಯ)**
**ಮುಖ್ಯಮಂತ್ರಿ**